# ಏನಾಯಿತು ರಂಗನೆ ನೋಡಿರಮ್ಮ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 29.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 131.
3. **Note:** Lyrics given here are as per Ref. 1. The wordings in Ref. 2 are similar to Ref. 1 with few differences, which are mentioned in yellow highlights.
4. **Note:** Singer has followed Ref. 2. But, she has taken a different Ankita.

ರಾಗ: ಶಂಕರಾಭರಣ ತಾಳ: ಅಟ

ಏನಾಯಿತು ರಂಗಗೆ ನೋಡಿರಮ್ಮ, ನಿ-
ಧಾನಿಸಿ ಎನಗೊಂದು ಪೇಳಿರಮ್ಮ || ಪ ||

ಪುಟ್ಟಿದಾರಭ್ಯ ಕಣ್ಣ ಮುಚ್ಚನಮ್ಮ, ತಾನು
ಎಷ್ಟಾದರು ಮೊಲೆಯುಣ್ಣನಮ್ಮ
ಸೊಟ್ಟಾದ ಮುಖ ಮೇಲಕೆತ್ತನಮ್ಮ, ಹೀಗೆ (ತಟುಕು ಮುಖ ಮೇಲಕೆತ್ತನಮ್ಮ, ಹೀಗೆ)
ಎಷ್ಟು ಹೇಳಲಿ ಬಾಯ ಮುಚ್ಚನಮ್ಮ || 1 ||

ಕಾಯ ಇದ್ದಂತಿದ್ದು ಹೆಚ್ಚಿತಮ್ಮ, ಹೆತ್ತ (ಕಾಯ ಇದ್ದ್ ಹಾಗಿದ್ದು ಹೆಚ್ಚಿತಮ್ಮ, ಹೆತ್ತ)
ತಾಯಿಯ ಬಲವಿಲ್ಲದಾಯಿತಮ್ಮ (ತಾಯಿ ನೆಲವಿಲ್ಲದಾಯಿತಮ್ಮ)
ನೋಯೆ ನೋಟದಿ ಅಬ್ಧಿ ಬತ್ತಿತಮ್ಮ, ಅವನ
ಬಾಯಿಯೊಳಗೆ ವಿಶ್ವ ತೋರಿತಮ್ಮ || 2 ||

ಅತ್ಯಂತ ಮಾತುಗಳನಾಡಿದನಮ್ಮ, ಮುಂದೆ
ಸತ್ಯವು ಕುದುರೆಯನೇರುವನಮ್ಮ
ನಿತ್ಯ ನಿರ್ದೋಷ ಪುರಂದರ ವಿಠ್ಠಲ, ತನ್ನ
ಭಕ್ತರ ಸಲಹುವ ದೇವನಮ್ಮ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಶ್ರೀ ಕೃಷ್ಣನು ಬಾಲ ಚೇಷ್ಟೆಗಳಿಂದ ಸಂಭ್ರಾಂತಳಾದ ಯಶೋದೆ 'ಈ ಮಗುವಿಗೇನಾಗಿದೆ ನೋಡಿರಿ' ಎಂದು ತಿಳಿದ ಹೆಣ್ಣು ಮಗಳಿಗೆ ಗಾಬರಿಯಿಂದ ಹೇಳಿದಂತೆ ಈ ಹಾಡಿನಲ್ಲಿ ಇದೆ.

**ನಿಧಾನಿಸಿ** = ಪರೀಕ್ಷಿಸಿ

**ಪುಟ್ಟಿದಾರಭ್ಯ ಕಣ್ಣು ಮುಚ್ಚನಮ್ಮ** = ಮತ್ಸ್ಯಾವತಾರ

**ತಾನು ಎಷ್ಟಾದರು ಮೊಲೆಯುಣ್ಣನಮ್ಮ** = ಕೂರ್ಮಾವತಾರ

**ಸೊಟ್ಟಾದ ಮುಖ ಮೇಲಕೆತ್ತನಮ್ಮ** = ವರಾಹಾವತಾರ

**ಹೀಗೆ ಎಷ್ಟು ಹೇಳಲಿ ಬಾಯ ಮುಚ್ಚನಮ್ಮ** = ನರಸಿಂಹಾವತಾರ

**ಕಾಯ ಇದ್ದಂತಿದ್ದು ಹೆಚ್ಚಿತಮ್ಮ** = ವಾಮನಾವತಾರ

**ಹೆತ್ತ ತಾಯಿಯ ಬಲವಿಲ್ಲದಾಯಿತಮ್ಮ** = ಪರಶುರಾಮಾವತಾರ

**ನೋಯೆ ನೋಟಕೆ ಅಬ್ಧಿ ಬತ್ತಿತಮ್ಮ** = ರಾಮಾವತಾರ

**ಅವನ ಬಾಯಿಯೊಳಗೆ ವಿಶ್ವ ತೋರಿತಮ್ಮ** = ಕೃಷ್ಣಾವತಾರ

**ಅತ್ಯಂತ ಮಾತುಗಳನಾಡಿದನಮ್ಮ** = ಬೌದ್ಧಾವತಾರ

**ಮುಂದೆ ಸತ್ಯವು ಕುದುರೆಯನೇರುವನಮ್ಮ** = ಕಲ್ಕ್ಯಾವತಾರ

**Classification:** Keerthane
**Ankita:** purandara vittala
**Location:** NA
**Category:** Krishna Leele, dashavatara
**Group Words:** ranga, Krishna, yashode, gopi, hennu, dashavatara, kannu, bayi, deha, Samudra, loka, kudure, deva
**Pravachana:** NA
**Explanation:** NA